ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಪಾವಗಡ ನ್ಯಾಯಾಲಯ

ಓ.ಎಸ್. ಸಂಖ್ಯೆ**402/2013**

ದಿನಾಂಕ **14.01.2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಡಿ.ಡಬ್ಲ್ಯೂ-1

<u>ಪಾಟೀ ಸವಾಲುಃ ವಾದಿಯ ಪರ ಶ್ರೀ ಡಿ.ವಿ.ಎಸ್. ವಕೀಲರಿಂದಃ</u>

1 ನೇ ವಾದಿಯ ತಾತನ ಹೆಸರು ಪಾತಣ್ಣ. ಅವರ ಮಕ್ಕಳ ಹೆಸರು ನನಗೆ ಗೊತ್ತಿಲ್ಲ. ಪಾತಣ್ಣನ ಯಾವ ಮಕ್ಕಳು ಜೀವಂತವಾಗಿದ್ದಾರೆ ಎಂದು ನನಗೆ ಗೊತ್ತಿಲ್ಲ, ಆದರೆ ದಾಸಣ್ಣ ಮತ್ತು ಗೋವಿಂದಪ್ಪ ರವರ ಬಗ್ಗೆ ಮಾತ್ರ ಗೊತ್ತು ಪಾತಣ್ಣನಿಗೆ ಗೋವಿಂದಪ್ಪ, ದಾಸಣ್ಣ, ನಾರಯಣಪ್ಪ ಮತ್ತು ಚೆನ್ನಯ್ಯ ಎಂಬ ಮಕ್ಕಳಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಪಾತಣ್ಣನನ್ನು ನಾನು ಯಾವತ್ತು ನೋಡಿಲ್ಲ. ಪಾತಣ್ಣನಿಗೆ ವಳ್ಳೂರಿನಲ್ಲಿ ಆಸ್ತಿ ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ಪಾತಣ್ಣನಿಗೆ ವಳ್ಳೂರಿನಲ್ಲಿ ಸ.ನಂ.336, 36/2, 37/5, 35/5, 199, 200 ಆಸ್ತಿಗಳು ಇದ್ದವು ಎಂದರೆ ನನಗೆ ಗೊತ್ತಿಲ್ಲ. ಸದರಿ ಸರ್ವೆ ನಂಬರ್ ಗಳ ಜೊತೆ ಮನೆ ಜಾಗ ಸಹ ಪಾತಣ್ಣನಿಗ ಇದ್ದವು ಎಂದರೆ ಸಾಕ್ಷಿ ವಳ್ಳೂರಿನಲ್ಲಿರುವ ಆಸ್ತಿಗಳ ಬಗ್ಗೆ ನನಗೆ ಗೊತ್ತಿಲ್ಲ, ಆದರೆ ಗೌಡೇಟಿ ಗ್ರಾಮದ ಆಸ್ತಿಗಳ ಬಗ್ಗೆ ಮಾತ್ರ ನನಗೆ ಗೊತ್ತು ಎಂದು ನುಡಿಯುತ್ತಾರೆ

2. ಪಾತಣ್ಣನ ಮಗ ನಾರಾಯಣಪ್ಪನನ್ನು ನಾನು ನೋಡಿಲ್ಲ. 1968 ನೇ ಇಸವಿಯಲ್ಲಿ ನಾರಾಯಣಪ್ಪ ಪಾತಣ್ಣನ ಒಟ್ಟು ಕುಟುಂಬದಿಂದ ಬೇರೆ ಆಗಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಿ.04.09.1968 ರಲ್ಲಿ ನಾರಾಯಣಪ್ಪ ರವರು ಅವರ ತಂದೆಯ ಹೆಸರಿಗೆ ಹಕ್ಕು ಬಿಡುಗಡೆ ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ ದಾಸಣ್ಣನ ಮಕ್ಕಳ ಮಧ್ಯೆ 8 ವರ್ಷಗಳ ಹಿಂದೆ ವಿಭಾಗ ಆಗಿದೆ. ದಾಸಣ್ಣನ ಮಕ್ಕಳು ಯಾವ ಯಾವ ಆಸ್ತಿಗಳು ವಿಭಾಗ ಮಾಡಿಕೊಂಡಿದ್ದಾರೆ ಎಂದು ನನಗೆ ಗೊತ್ತು. ಗೌಡೇಟಿ ಸ.ನಂ.47 ರಲ್ಲಿ ನಾನು ಮತ್ತು ತಿಮ್ಮಾರೆಡ್ಡಿ ವಿಭಾಗ ಮಾಡಿಕೊಂಡಿದ್ದೇವೆ. ಕನಕಾಪುರದ ಸ.ನಂ.27 ರಲ್ಲಿ ಶ್ರೀರಾಮುಲು ತೆಗೆದುಕೊಂಡಿದ್ದಾರೆ. ಉಳಿದಂತೆ ಇರುವ ಆಸ್ತಿಗಳನ್ನು ನಮ್ಮ ತಂದೆಯೆ ಮಾರಾಟ ಮಾಡಿರುತ್ತಾರೆ.

3. ನಾನು ನನ್ನ ಅಣ್ಣ ತಮ್ಮಂದಿರು ವಿಭಾಗ ಮಾಡಿಕೊಂಡ ನಂತರ ಖಾತೆ ಮಾಡಿಕೊಂಡ ದಿನಾಂಕ ನನಗೆ ನೆನಪಿಲ್ಲ. ದಾವೆಯಲ್ಲಿ ತಕರಾರು ಸಲ್ಲಿಸಲು ನನ್ನ ವಕೀಲರಿಗೆ ನಾನೆ ಮಾಹಿತಿ ನೀಡಿದ್ದೇನೆ. ನಾನು ನನ್ನ ತಕರಾರಿನಲ್ಲಿ ವಳ್ಳೂರು ಗ್ರಾಮದಲ್ಲಿರುವ ಆಸ್ತಿಗಳನ್ನು ಮಾರಾಟ ಮಾಡಿ ಕುಟುಂಬದ ಸಾಲಗಳನ್ನು ತೀರಿಸಿದ್ದೇವೆ ಎಂದು ಹೇಳಿರುವುದು ಸುಳ್ಳು. ನನ್ನ ತಂದೆ ಗೌಡೇಟಿಗೆ ಯಾವಾಗ ಬಂದಿದ್ದಾರೆ ಎಂದು ದಿನಾಂಕ ನನಗೆ ಹೇಳಲು ಆಗುವುದಿಲ್ಲ. ನನ್ನ ತಂದೆ ಗೌಡೇಟಿಗೆ ಸುಮಾರು ಎಷ್ಟು ವರ್ಷದ ಹಿಂದೆ ಹೋಗಿದ್ದರು ಎಂದು ಸಹ ನನಗೆ ಹೇಳಲು ಆಗುವುದಿಲ್ಲ. ನನ್ನ ತಂದೆ ಎಷ್ಟು ವರ್ಷದಿಂದ ವಾಸವಿದ್ದರು ಎಂದು ನಾನು ಯಾರನ್ನು ಕೇಳಿ ತಿಳಿದುಕೊಂಡಿರುವುದಿಲ್ಲ. ನನ್ನ ಸಾಕ್ಷ್ಯ ಪ್ರಮಾಣ ಪತ್ರದ ಕಂಡಿಕೆ 4 ರಲ್ಲಿ ಹೇಳಿರುವ ಕ್ರಯಪತ್ರಗಳನ್ನು ಯಾವ ಕಾರಣಕ್ಕೆ ಮಾಡಿದ್ದಾರೆ ಎಂದರೆ ನನ್ನ ತಾಯಿಗೆ ಆರೋಗ್ಯ ಸರಿಯಿಲ್ಲದ ಕಾರಣ ಮತ್ತು ನನ್ನ ಅಣ್ಣ ತಿಮ್ಮಾರೆಡ್ಡಿಯ ವಿದ್ಯಾಭ್ಯಾಸಕ್ಕಾಗಿ ಜಮೀನನ್ನು ಮಾರಾಟ ಮಾಡಿದ್ದಾರೆ. ನನ್ನ ತಾಯಿಗೆ ಆರೋಗ್ಯ ಸರಿ ಇರಲಿಲ್ಲ ಎಂದು ತೋರಿಸುವ ದಾಖಲೆಗಳನ್ನು ನಾನು ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದೇನೆ. ನನ್ನ ಅಣ್ಣ ತಿಮ್ಮಾರೆಡ್ಡಿ ಬಿ.ಎಸ್ಸಿ ವಿದ್ಯಾಭ್ಯಾಸ ಮಾಡಿದ್ದಾರೆ. ನನ್ನ ಅಣ್ಣನ ವಿದ್ಯಾಭ್ಯಾದ ದಾಖಲೆಗಳನ್ನು ನಾನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ.

5. ದಾವಾ ಸ್ವತ್ತುಗಳನ್ನು ನನ್ನ ತಂದೆ ಸ್ವಯಾರ್ಜಿತವಾಗಿ ಸಂಪಾದನೆ ಮಾಡಿದ ಹಣದಿಂದ ಖರೀದಿ ಮಾಡಿದ್ದಾರೆ. ನನ್ನ ತಂದೆ ಬದುಕಿದ್ದಾಗ ಕುರಿ ಮೇಕೆ ಸಾಕಿ ಅವುಗಳನ್ನು ಮಾರಿ ಆಸ್ತಿ ಸಂಪಾದಿಸಿದ್ದೇನೆ ಎಂದು ಹೇಳುತ್ತಿದ್ದರು. ನನ್ನ ತಂದೆ ಕುರಿ ಮೇಕೆ ಮಾರಿ ಆಸ್ತಿ ಸಂಪಾದಿಸಿದ್ದಾರೆ ಎಂದು ನಾನು ನನ್ನ ತಕರಾರಿನಲ್ಲಾಗಲಿ, ಸಾಕ್ಷ್ಯಪ್ರಮಾಣ ಪತ್ರದಲ್ಲಾಗಲಿ ಹೇಳಿರುವುದಿಲ್ಲ
<u>ಈ ಹಂತದಲ್ಲಿ ಸಾಕ್ಷಿಯು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಆಲಿಸಿ ಮುಂದೂಡಲಾಯಿತು.</u>

(ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ . ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್. ಸಿ.,

**O.S.No. 402/2013**
DW-1

ಪಾವಗಡ